ಇಟ್ಟಿದ್ದರೆ ಅದರಲ್ಲಿ ಖರ್ಚಾಗಿರುವುದು 1 ಲಕ್ಷ 21 ಸಾವಿರ ಮಾತ್ರ. ಗಂಗಾಕಲ್ಯಾಣ ಯೋಜನೆಯಲ್ಲಿ 500 ಲಕ್ಷ ನಿಗಧಿ ಆಗಿದ್ದರೆ ಖರ್ಚಾಗಿರುವುದು 31.86 ಲಕ್ಷ ಮಾತ್ರ. ಇನ್ನು ಗ್ರಾಮೀಣ ಅಭಿವೃದ್ಧಿ ಬಗ್ಗೆ ತಮ್ಮನ್ನು ದೇವರೇ ಕಾಪಾಡಬೇಕು. ಗ್ರಾಮೀಣ ಪುನರ್ನಿರ್ಮಾಣ 1995-96ರಲ್ಲಿ 154 ಕೋಟಿ 9 ಲಕ್ಷ ರೂಪಾಯಿಗಳನ್ನು ತಗೆದಿಟ್ಟಿದ್ದಿರಿ. ಅದರಲ್ಲಿ ಖರ್ಚಾಗಿರುವುದು 92 ಕೋಟಿ ಮಾತ್ರ. ಇದು ದಿವಂಗತ ಇಂದಿರಾಜಿಯವರ ಆಂತರಕ್ಕೆ. ಕರ್ನಾಟಕ ರಾಜ್ಯದಲ್ಲಿ 175 ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಕೊಳವೆ ಬಾವಿಗಳನ್ನು ಕೊರೆಯುವುದಕ್ಕೋಸ್ಕರ ಜಿ.ಆರ್. ಗಳಲ್ಲಿ ಇರುವಂತಹ ನಿಮ್ಮ ರಿಜಿಸ್ಟರ್‌ಗಳನ್ನು ರಿಪೇರಿ ಮಾಡಿಸುವುದಕ್ಕೆ ನಿಮ್ಮಿಂದ ಆಗಲಿಲ್ಲ. ಪ್ರವೇಟಿನಲ್ಲಿ ತಗಮಕೊಳ್ಳುವುದಕ್ಕೆ ಅನುಮತಿ ಕೂಡಲಿಲ್ಲ ಈಗ ತಗಮುಕೊಳ್ಳಿ ಅಂತ ಹೇಳುತ್ತಿರಿ. ಪ್ರವೇಟಿನಲ್ಲಿ ಯಾವುದೇ ರಿಗ್ ಓಡುತ್ತಿಲ್ಲ ಅಲ್ಲಿ ಕೊಳವೇ ಬಾವಿಗಳನ್ನು ತಗೆಯುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಜವಾಹರ್ ರೋಜಗಾರ್ ಯೋಜನ ಇಂದಿರಾ ಆವಾಸ್ ಯೋಜನ ಮಿಲಿಯನ್ ವೆಲ್ ಪ್ರೋಗ್ರಾಂ ಡಿ.ಆರ್.ಡಿ.ಪಿ. ಯೋಜನೆಗಳಲ್ಲಿ ಇವತ್ತಿನವರೆಗೂ ಆಗಿರುವಂತಹ 31-1-96ರವರೆಗೆ ಶೇಕಡ 58 ಮಾತ್ರ ನಿಮ್ಮ ಪ್ರಗತಿ ಆಗಿದೆ. ನಿರ್ಮಲ ಕರ್ನಾಟಕ ಪ್ರಥಮ ಕಾರ್ಯಕ್ರಮ.

12.00 ಪಿ.ಎಂ.

ಈ ವ್ಯವಹಾರದಲ್ಲಿ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಅಮಾನತಗೊಳಿಸಿದಿರಿ, ಅದರ ಬಗ್ಗೆ ಲೋಕಾಯುಕ್ತಕ್ಕೆ ಹೋದ ಮೇಲೆ ಖುಲಾಸೆಯಾಗಿ ಬಂದಿದ್ದಾರೆ. ಆಮೇಲೆ, 5 ಲಕ್ಷ ಶೌಚಾಲಯಗಳನ್ನು ನಿರ್ಮಿಸುತ್ತೇವೆಂದು ಹೇಳಿದ್ದಿ, ಅದರ ಸಾಧನೆ ಏನೆಂದು ದಯವಾಗಿ ಉತ್ತರ ಕೊಡುವಾಗ ಹೇಳಬೇಕು. ನಿಮ್ಮ ಸರ್ಕಾರದಲ್ಲಿ ಕಮಿಟಿ ಶಿಫಾರಸಗಳಿಗೆ ಮೂರು ಕಾಸು ಬೆಲೆ ಇದಯಾ? ಪ್ರತಿ ವಿಧಾನ ಸಭೆ ಅಭಿವೃದ್ಧಿ ಕಾರ್ಯಗಳಿಗೆ 30 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕಮಿಟಿಯಲ್ಲಿ ಶಿಫಾರಸ್ ಮಾಡಿ ಕಳುಹಿಸಿದ್ದರೂ, ಆದರೆ, ಈ ವರ್ಷ 10 ಲಕ್ಷ ರೂಪಾಯಿಗಿಂತ ಹೆಚ್ಚು ಖರ್ಚು ಮಾಡಬಾರದೆಂದು ಸರ್ಕಾರದಿಂದ ಪ್ರೊಟೆಕ್ಷನ್ ಹೋಗಿದೆ. ಜನರಿಗೆ ಭರವಸೆ ಕೊಟ್ಟಂತ ಯಾವುದೇ ಕಾರ್ಯವನ್ನು ಕಾರ್ಯರೂಪಕ್ಕೆ ತರುವಂಥ ಪ್ರಾಮಾಣಿಕ ಪ್ರಯತ್ನ ಇಮವರೆಗೂ ಆಗಲಿಲ್ಲ. ನಂತರ ಬೆಂಗಳೂರು ನಗರವನ್ನು ಸುತ್ತುವರಿಯುವ ಪರ್ತುಲ ರಸ್ತೆಯನ್ನು ನಿರ್ಮಾಣ ಮಾಡುವುದಕ್ಕೆ ಬಾಸಗಿಯವರಿಗೆ ಕೆಲಸ ಮಹಿಸಿಕೊಂಡು ಸರ್ಕಾರ ತೀರ್ಮಾನಿಸಿದೆ.

ANNOUNCEMENT

ಉಪಾಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ. I welcome the Hon'ble members of the Assurances Committee to Sikkim Legislative Assembly who are witnessing the proceedings of the House from the Speaker's Gallery.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಡತನ ನಿವಾರಣೆಗೆ ಬಡ ಪಿಡ್ಡಾಮಂತ ನಿರುದ್ಯೋಗಿಗಳಿಗೆ ಸಾಲ ಕೊಡುವುದರಲ್ಲಿ 7,500 ರೂಪಾಯಿಗಳನ್ನು ಸರ್ಕಾರ ಸಬ್ಸಿಡಿ ಕೊಡುತ್ತೇವೆಂದು ಸರ್ಕಾರ